ದೊಡ್ಡ ಪದಗಳನ್ನು ಬಳಸಿದೆ. ಅವು ಯಾರಿಗೂ ಅರ್ಥವಾಗಲಿಲ್ಲ, ಆದ್ರೆ ಏನೋ ದೊಡ್ಡ ವಿಚಾರ ಅಂತ ಮಾತ್ರ ಎಲ್ಲರಿಗೂ ಅನ್ನಿಸಿತು. ಬಹಳ ಚರ್ಚೆಯ ನಂತರ ಒಂದು ತೀರ್ಮಾನ ಆಯ್ತು. ಲ್ಯಾಪ್‌ಟಾಪ್ ತಗೋಬಹುದು. ಆದ್ರೆ ಅದರ ಜೊತೆಗೇ ಒಂದು ಐತಿಹಾಸಿಕ ಘೋಷಣೆ ಕೂಡ ಆಯ್ತು, ಇದು ಮನೆಯ ಲ್ಯಾಪ್‌ಟಾಪ್.ಆ ಕ್ಷಣದಲ್ಲಿ ನನಗೆ ಸಂಶಯ ಬರಬೇಕಿತ್ತು. ಆದ್ರೆ ಖುಷಿಯಲ್ಲಿ ಬುದ್ಧಿ ರಜೆ ಹಾಕಿತ್ತು. ಖರೀದಿ ದಿನ ಶಾಪ್‌ಗೆ ಹೋದಾಗ ನಾನು ಟೆಕ್ನಾಲಜಿ ತಜ್ಞನಂತೆ ನಟಿಸುತ್ತಿದ್ದೆ. ಸೇಲ್ಸ್‌ಮನ್ ಕೇಳಿದ 'ಸರ್, i5 ಬೇಕಾ i7?' ನಾನು ಕ್ಷಣ ಯೋಚಿಸಿ ಹೇಳಿದೆ 'ಯೂಟ್ಯೂಬ್ ಅಡ್ಡಿ ಇಲ್ಲದೇ ಓಡಬೇಕು'. ಅಪ್ಪ ಕೂಡ ತಮ್ಮದೇ ಪ್ರಶ್ನೆ ಸೇರಿಸಿದರು 'ಇದು ಬಿಸಿಯಾಗುತ್ತಾ? ಕರೆಂಟ್ ಜಾಸ್ತಿ ತಿನ್ನುತ್ತಾ? ದೇವರ ಫೋಟೊ ಇಡಬಹುದಾ?'

ಆ ಕ್ಷಣದಲ್ಲಿ ಸೇಲ್ಸ್‌ಮನ್ ಮುಖದಲ್ಲಿ ಒಂದು ವಿಚಿತ್ರ ಸಹಾನುಭೂತಿ ಮೂಡಿತು. ಕೊನೆಗೆ ಲ್ಯಾಪ್‌ಟಾಪ್ ಕೈಗೆ ಬಂತು. ಅದನ್ನು ಹಿಡಿದ ರೀತಿ ನೋಡಿದ್ರೆ ಮಗು ಮನೆಗೆ ತಂದ ಹಾಗಿತ್ತು. ಬ್ಯಾಗ್ ನನ್ನ ಕೈಯಲ್ಲಿರಲಿಲ್ಲ, ಹೃದಯದಲ್ಲಿತ್ತು. ಮನೆಗೆ ಬಂದ್ಮೇಲೆ ನಿಜವಾದ ಕಥೆ ಶುರು. ಬಾಕ್ಸ್



ತೆಗೆಯೋ ಮುಂಚೆ ಅಮ್ಮ ಆರತಿ ತಟ್ಟೆ ತಂದರು. ಅಪ್ಪ ಹೂ ಇಟ್ಟರು. ಅಕ್ಕ ಫೋಟೊ ತೆಗೆದು ಸ್ಟೇಟಸ್ ಹಾಕಿದಳು. ಲ್ಯಾಪ್‌ಟಾಪ್ ಆನ್ ಆಗೋ ಮುಂಚೆ ಅದು ಈಗಾಗಲೇ ಮನೆಯ ಸದಸ್ಯ ಆಗಿಬಿಟ್ಟಿತ್ತು. ಆನ್ ಮಾಡಿದ ಕ್ಷಣದಿಂದಲೇ ಅದು ನನ್ನ ಕೈಯಿಂದ ಹೊರಟುಹೋಯ್ತು. ಅಮ್ಮಗೆ ಅಡುಗೆ ವಿಡಿಯೊ. ಅಪ್ಪಗೆ ಭಜನೆ. ಅಕ್ಕಗೆ ಒಂದು ಎಪಿಸೋಡ್ ಮಾತ್ರ. ನಾನು ಮಧ್ಯೆ ಕೇಳಿಕೊಂಡಾಗ ಸ್ವಲ್ಪ ನನಗೂ ಬೇಕು ಎಲ್ಲರ ಉತ್ತರ ಒಂದೇ ಇವತ್ತಲ್ಲ, ನಾಳೆ. ಆ ನಾಳೆ ಇನ್ನೂ ಬಂದಿಲ್ಲ. ಬೆಳಿಗ್ಗೆ ಲ್ಯಾಪ್‌ಟಾಪ್ ಅಮ್ಮನದ್ದು. ಮಧ್ಯಾಹ್ನ ಅಪ್ಪನದ್ದು. ಸಂಜೆ ಅಕ್ಕನದ್ದು. ರಾತ್ರಿ ಚಾರ್ಜಿಂಗ್‌ಗೆ! ನಾನು ಮಾತ್ರ ಬಳಕೆದಾರ ಅಲ್ಲ, ಸಮಯ ಕೇಳುವ ಅರ್ಜಿದಾರ.

ಒಂದು ದಿನ ಅಮ್ಮ ಇದು ನಿಧಾನವಾಗಿದೆ. ಅಪ್ಪ ಮೊದಲಿನ ದಿನ ಚೆನ್ನಾಗಿತ್ತು. ಅಕ್ಕ ನಿನ್ನ ಲ್ಯಾಪ್‌ಟಾಪ್ ಹ್ಯಾಂಗ್ ಆಗ್ತಿದೆ. ಲ್ಯಾಪ್‌ಟಾಪ್ ಹ್ಯಾಂಗ್ ಆದರೂ ಆರೋಪ ನನ್ನ ಮೇಲೇ. ಪಕ್ಕದ ಮನೆಯವರು ಬಂದಾಗ ಅಪ್ಪ ಹೆಮ್ಮೆಯಿಂದ ಹೇಳಿದರು ನಮ್ಮ ಮನೆಗೂ ಲ್ಯಾಪ್‌ಟಾಪ್ ಬಂದಿದೆ! ನಾನು ಒಳಗೊಳಗೆ ಯೋಚಿಸಿದೆ ನಮ್ಮ ಮನೆಗೂ ಅಲ್ಲ... ಎಲ್ಲರಿಗೂ ಬಂದಿದೆ! ಒಂದು ದಿನ ಅಪ್ಪ ಅಂತಿಮ ಘೋಷಣೆ ಮಾಡಿದರು, 'ಸಂಜೆ ಏಳರಿಂದ ಒಂಬತ್ತರವರೆಗೆ ಲ್ಯಾಪ್‌ಟಾಪ್ ನನ್ನದು'. ಅಂದು ನನಗೆ ಸ್ಪಷ್ಟವಾಯ್ತು ನಾನು ಲ್ಯಾಪ್‌ಟಾಪ್ ಖರೀದಿಸಿಲ್ಲ ಒಂದು ಕುಟುಂಬೀಯ ಪ್ರಯೋಗಕ್ಕೆ ಸಿಕ್ಕಿಬಿದ್ದಿದ್ದೇನೆ. ಆದ್ರೆ ಒಂದು ವಿಷಯ ಮಾತ್ರ ನಿಜ. ಈ ಲ್ಯಾಪ್‌ಟಾಪ್ ಇಲ್ಲದಿದ್ರೆ ಇಷ್ಟು ಮಾತು ಇಷ್ಟು ನಗು, ಇಷ್ಟು ಗದ್ದಲ ನಮ್ಮ ಮನೆಯಲ್ಲಿ ಇರ್ತಿರಲಿಲ್ಲ. ಇವತ್ತು ಹಿಂತಿರುಗಿ ನೋಡಿದಾಗ ನಾನು ಹೆಮ್ಮೆಯಿಂದ ಹೇಳ್ತೀನಿ 'ನಾನು ಲ್ಯಾಪ್‌ಟಾಪ್ ಖರೀದಿಸಿದ್ದೇನೆ. ಆದ್ರೆ ಅದರ ಜೊತೆಗೆ ಒಂದು ಪೂರ್ಣ ಕುಟುಂಬ ಕಥೆ, ಒಂದು ಹಾಸ್ಯದ ಸಂಗ್ರಹ, ಮತ್ತು ಅನೇಕ ನಗು ಕ್ಷಣಗಳನ್ನು ಉಚಿತವಾಗಿ ಪಡೆದುಕೊಂಡಿದ್ದೇನೆ' ಎಂದು. ಹೀಗಾಗಿ ಯಾರಾದ್ರೂ ಕೇಳಿದ್ರೆ 'ಲ್ಯಾಪ್‌ಟಾಪ್ ತಗೋಬೇಕಾ?' ನಾನು ಶಾಂತವಾಗಿ ಹೇಳ್ತೀನಿ, 'ಒಬ್ಬರಿಗೆ ಬೇಕಾದ್ರೆ ತಗೋ ಕುಟುಂಬಕ್ಕೆ ಬೇಕು ಅಂದ್ರೆ ಸಿದ್ಧರಾಗಿ!'.

ಲ್ಯಾಪ್‌ಟಾಪ್ ಮನೆಗೆ ಬಂದು ಒಂದು ವಾರ ಕಳೆದಾಗ ನಾನು ಒಂದು ವಿಷಯ ಸ್ಪಷ್ಟವಾಗಿ ಗಮನಿಸಿದೆ. ಈ ಯಂತ್ರದ ಬ್ಯಾಟರಿ ಮಾತ್ರವಲ್ಲ, ನನ್ನ ಸಹನೆಯೂ ನಿಧಾನವಾಗಿ ಡಿಸ್ಚಾರ್ಜ್ ಆಗ್ತಾ ಇತ್ತು ಮೊದಲ ವಾರ ಲ್ಯಾಪ್‌ಟಾಪ್‌ಗೆ ಹೊಸತನದ ಗೌರವ ಇತ್ತು. ಎಲ್ಲರೂ ಅದನ್ನು ನಿಧಾನವಾಗಿ ಮುಟ್ಟುತ್ತಿದ್ದರು. ಸ್ಕ್ರೀನ್ ಮೇಲೆ ಬೆರಳು ಹಾಕೋ ಮುಂಚೆ ಕೈ ಒರೆಸಿಕೊಳ್ಳೋ ಪದ್ಧತಿ ಶುರು ಆಯ್ತು. ಆದ್ರೆ ಎರಡನೇ ವಾರದಿಂದ ಲ್ಯಾಪ್‌ಟಾಪ್ ನಮ್ಮ ಮನೆಯಲ್ಲೇ ಒಂದು ಸಾಮಾನ್ಯ ವಸ್ತು ಆಯ್ತು. ಮಂಚ, ಕುರ್ಚಿ, ಟೇಬಲ್‌ಗಳ ಜೊತೆ ಇದಕ್ಕೂ ಸಮಾನ ಸ್ಥಾನ. ಅದೇ ಸಮಯಕ್ಕೆ ಹೊಸ ಹೊಸ ನಿಯಮಗಳು ಹುಟ್ಟಿದವು.

ಮೊದಲ ನಿಯಮ; ಚಾರ್ಜ್ ಮುಗಿದ್ರೆ ನೀನೇ ಕಾರಣ. ನಾನು ಲ್ಯಾಪ್‌ಟಾಪ್ ಬಳಸದೇ ಇದ್ದರೂ ಚಾರ್ಜ್ ಕಡಿಮೆ ಆದ್ರೆ ಅದರ ಹೊಣೆ ನನ್ನದೇ. ಎರಡನೇ ನಿಯಮ; ಸ್ಲೋ ಆದ್ರೆ ನೀನೇ ಕಾರಣ. ಅಮ್ಮ ಅಡುಗೆ ವಿಡಿಯೊ ಸ್ಕಿಪ್ ಆಗಿದ್ರೆ ನೀನು ಏನು ಡೌನ್‌ಲೋಡ್ ಮಾಡಿದ್ದಿಯಾ? ಅಪ್ಪ ಭಜನೆ ಮಧ್ಯೆ ಅಡ್ಡಿ ಬಂದ್ರೆ ನೀನು ಏನಾದ್ರೂ ಮಾಡಿದ್ದೀಯಾ? ಅಕ್ಕನ ಸೀರೀಸ್ ಬಫರ್ ಆದ್ರೆ ನಿನ್ನ ಫೈಲ್‌ಗಳಿಂದ ತುಂಬಿಕೊಂಡಿದೆ!. ನಾನು ಮಾತ್ರ ಮೌನವಾಗಿ ಲ್ಯಾಪ್‌ಟಾಪ್ ಅನ್ನೇ ನೋಡುತ್ತಾ ನಾನು ಏನು ಮಾಡಿದೆ? ಅಂತ ಯೋಚಿಸುತ್ತಿದ್ದೆ.

ಒಂದು ಭಾನುವಾರ ಅತ್ತೆ ಮಾಮ ಮಕ್ಕಳು ಎಲ್ಲರೂ ಮನೆಗೆ ಬಂದರು. ಅಪ್ಪ ಅವರಿಗೆ ಹೆಮ್ಮೆಯಿಂದ ಹೇಳಿದರು ನಮ್ಮ ಮನೆಗೂ ಲ್ಯಾಪ್‌ಟಾಪ್ ಬಂದಿದೆ. ಆ ಮಾತು ಕೇಳಿದಾಗ ನನ್ನಲ್ಲಿದ್ದ ಚಳಿ ಓಡಿತು. ಏಕೆಂದರೆ ನನಗೆ ಗೊತ್ತು ಈ ಘೋಷಣೆಯ ನಂತರ ಏನು ನಡೆಯಲಿದೆ ಎಂದು. ಅತ್ತೆ ಮೊದಲೇ ಪ್ರಶ್ನೆ ಹಾಕಿದರು; ಇದರಲ್ಲಿ ಭಜನೆ ಹಾಕಬಹುದು ಅಲ್ವಾ?, ಮಾಮ; ನನ್ನ ಫೋನ್‌ನ ಫೋಟೊವನ್ನು ಇದ್ರಲ್ಲಿ ಹಾಕೋದು ಹೇಗೆ?. ಮಕ್ಕಳು; ಗೇಮ್ ಇದ್ಯಾ? ಇಂಟರ್‌ನೆಟ್ ಇದ್ಯಾ? ನಾವು ಆಡಬಹುದಾ? ನಾನು ಮಾತಾಡೋಷ್ಟರಲ್ಲಿ ಲ್ಯಾಪ್‌ಟಾಪ್ ಅವರ ಕೈಗೆ ಹೋಯ್ತು. ಅವರು ನೋಡ್ತಾ ಇದ್ದ ರೀತಿ ನೋಡಿದ್ರೆ ಅದು ಹೊಸ ಆಟಿಕೆ! ಒಬ್ಬ ಮಗು ಕೇಳಿತು ಅಂಕಲ್, ಇದ್ರಲ್ಲಿ ಕಾರ್ಟೂನ್ ಬರುತ್ತಾ? ನಾನು ಹೇಳಿದೆ ಬರುತ್ತೆ ಅಷ್ಟೆ. ನನ್ನ ತಪ್ಪಿನಿಂದ ಮೂರು ಗಂಟೆ ಕಾರ್ಟೂನ್ ಮ್ಯಾರಥಾನ್! ಅವರು ಹೋಗುವಷ್ಟರಲ್ಲಿ ಲ್ಯಾಪ್‌ಟಾಪ್ ಬಿಸಿಯಾಗಿತ್ತು, ಚಾರ್ಜ್ ಮುಗಿದಿತ್ತು, ಮತ್ತು ನನ್ನ ಮನಸ್ಸು ಕೂಡ. ಅಪ್ಪ ಮಾತ್ರ ಹೆಮ್ಮೆಯಿಂದ ಹೇಳಿದರು ನಮ್ಮ ಲ್ಯಾಪ್‌ಟಾಪ್ ನೋಡಿದಿಯಾ? ಎಷ್ಟು ಉಪಯೋಗ?

ನಾನು ಒಳಗೊಳಗೆ, ಹೌದು ನನ್ನ ಕೆಲಸಕ್ಕೆ ಮಾತ್ರ ಉಪಯೋಗ ಇಲ್ಲ. ಒಂದು ದಿನ ಬೆಳಿಗ್ಗೆ ನಾನು ಗಂಭೀರವಾಗಿ ನಿರ್ಧಾರ ಮಾಡಿಕೊಂಡೆ. ಇವತ್ತು ಯಾರೇ ಏನೇ ಕೇಳಿದ್ರೂ ನನ್ನ ಕೆಲಸ ಮೊದಲು, ಲ್ಯಾಪ್‌ಟಾಪ್ ತೆರೆದು ಕುಳಿತುಕೊಂಡೆ. ಅಷ್ಟರಲ್ಲೇ ಅಮ್ಮ ಬಂದ್ರು, 'ಸ್ವಲ್ಪ ಆನ್ ಮಾಡು' ಎಂದ್ರು. ನಾನು 'ಆನ್ ಇದೆ'. ಅಲ್ಲ ಯೂಟ್ಯೂಬ್. ನಾನು ನಿಧಾನವಾಗಿ ಹೇಳಿದೆ 'ಅಮ್ಮ, ಇವತ್ತು ನನಗೆ ಕೆಲಸ ಇದೆ'. ಅಮ್ಮ ಯೋಚಿಸಿ ಹೇಳಿದರು, 'ಹಾಗಾದ್ರೆ ಮೊದಲು ಕೆಲಸ ಮಾಡು. ನಾನು ನೋಡಲ್ಲ'.

ನನ್ನೊಳಗೆ ಖುಷಿ. ಐದು ನಿಮಿಷ ಕಳೆದ ಮೇಲೆ ಅಮ್ಮ ಮತ್ತೆ ಬಂದ್ರು; 'ನೀನು ಕೆಲಸ ಮಾಡ್ತಾ ಇದಿಯಾ?'

'ಹೌದಮ್ಮ, ಹಾಗಾದ್ರೆ ಸೈಡ್‌ಗೆ ಕುಳಿತುಕೊಂಡು ನಾನು ವಿಡಿಯೊ ನೋಡ್ತೀನಿ'.

ಆ ಕ್ಷಣದಲ್ಲಿ ನನಗೆ ಅರ್ಥ ಆಯ್ತು ಈ ಮನೆಯಲ್ಲಿ ಸೈಡ್ ಅನ್ನೋದು ನನಗೇ! ಅಪ್ಪಗೆ ಲ್ಯಾಪ್‌ಟಾಪ್ ಅಂದ್ರೆ ಒಂದು ಸಂಶೋಧನಾ ಸಾಧನ. ಒಂದು ದಿನ ಅಪ್ಪ ಕೇಳಿದರು, 'ಇದನ್ನು